(ಈ) ಮೇಲಿನ ಉತ್ತರದಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ.

(ಉ) ಕೋಲಾರ ಜಿಲ್ಲೆಯಲ್ಲಿ ೧,೯೫.೨೨೨ ಹಸಿರು ಕಾರ್ಡುಗಳನ್ನು ಹಂಚಿದ್ದಾರೆ. ಮುಳಬಾಗಿಲು ತಾಲೋಕಿನಲ್ಲಿ ಎಲ್ಲಾ ಹಸಿರು ಕಾರ್ಡುದಾರರಿಗೆ ಬಟ್ಟೆ ಮತ್ತು ಧಾನ್ಯಗಳನ್ನು ಕೊಡಲಾಗಿದೆ.

ವಿರಾಜ ಪೇಟೆಯಂ ವಂತರ್ತು ಸುತ್ತಮಂತ್ತಲ ಹಳ್ಳಿಗಳಲ್ಲಿ ನಡೆದ ಗಲಭೆಗಳ ಬಗ್ಗೆ

೨೨ (೧೮) ಶ್ರೀ ಆರ್. ವೆಂಕಟರಾಮಯ್ಯ (ಮುಳಬಾಗಿಲು).—ಮಾನ್ಯ ಗೃಹ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೇ:—

(ಅ) ಕೊಡಗು ಜಿಲ್ಲೆ ವಿರಾಜಪೇಟೆಯಲ್ಲಿ ಹಾಗೂ ಸುತ್ತ ಮುತ್ತ ಹಳ್ಳಿಗಳಲ್ಲಿ ಇಲ್ಲ ಸಂಖ್ಯಾತರು ಮತ್ತು ಭಾಷಾ ಅಲ್ಪ ಸಂಖ್ಯಾತರ ಮೇಲೆ ಹಲವು ಕಿಡಿಗೇಡಿಗಳು ಕಿರುಕುಳವನ್ನು ಕೊಟ್ಟು ಶಾಂತಿಭಂಗತೆಗೆ ಧಕ್ಕೆ ಉಂಟು ಮಾಡುತ್ತಿರುವುದು ಸರಕಾರದ ಗಮನಕ್ಕೆ ಬಂದಿದೆಯೇ, ಹಾಗಿದ್ದಲ್ಲಿ ಇಂತಹ ಪ್ರಕರಣಗಳು ಎಷ್ಟು ?

(ಆ) ಗುಂಡಾ ಕಾಯಿದೆಯ ಪ್ರಕಾರ ತಪ್ಪಿತಸ್ಥರ ಮೇಲೆ ಕ್ರಮ ಕೈಗೊಳ್ಳಲಾಗಿದೆಯೇ, ಇಂತಹ ತಪ್ಪಿತಸ್ಥರ ಸಂಖ್ಯೆ ಎಷ್ಟು ?

(ಇ) ಮೇಲ್ಕಂಡ ತಪ್ಪಿತಸ್ಥರು ಅವರ ಮೇಲಿರುವ ಅಪಾದನೆಗಳಿಂದ ತಪ್ಪಿಸಿಕೊಳ್ಳಲು ಪ್ರಯತ್ನಿಸುತ್ತಿರುವುದು ಸರಕಾರದವರ ಗಮನಕ್ಕೆ ಬಂದಿದೆಯೇ, ಬಂದಿದ್ದಲ್ಲಿ ಸರ್ಕಾರದವರು ಅಂತಹುದನ್ನು ತಿರಸ್ಕರಿಸಿದ್ದಾರೆಯೇ ?

ಶ್ರೀ ಬಿ. ರಾಚಯ್ಯ (ಗೃಹಮಂತ್ರಿಗಳು).—

(ಅ) ಬಂದಿದೆ. ೨೦

(ಆ) ಇಲ್ಲ. ಉದ್ಭವಿಸುವುದಿಲ್ಲ.

(ಇ) ಬಂದಿಲ್ಲ. ಉದ್ಭವಿಸುವುದಿಲ್ಲ

ಕ್ರಿಮಿನಲ್ ಮೊಕದ್ದಮೆಗಳು

೨೩ (೪೫) (ಬಿ) ಶ್ರೀ ಆರ್. ವೆಂಕಟರಾಮಯ್ಯ (ಮುಳಬಾಗಿಲು).—ಮಾನ್ಯ ಗೃಹ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೇ:—

(ಅ) ರಾಜ್ಯದಲ್ಲಿ ೧-೧-೮೬ ರಿಂದ ೩೦-೬-೮೬ರ ವರೆಗೆ ದಾಖಲಾದ ಕ್ರಿಮಿನಲ್ ಮೊಕದ್ದಮೆಗಳ ಸಂಖ್ಯೆ ಎಷ್ಟು ? ಅವುಗಳಲ್ಲಿ 'ಬಿ' ರಿಪೋರ್ಟ್ ಮತ್ತು 'ಸಿ' ರಿಪೋರ್ಟ್ ಕೊಟ್ಟವುಗಳು ಎಷ್ಟು ?

(ಆ) ನ್ಯಾಯಾಲಯದಲ್ಲಿ ದಾಖಲು ಮಾಡಿರುವುಗಳು ಸಂಖ್ಯೆ ಎಷ್ಟು ? ಶಿಕ್ಷೆಯಾಗಿರುವುವು ಎಷ್ಟು ? ಮುಗಿದಿರುವ ಪ್ರಕರಣಗಳು ಎಷ್ಟು ? ಶೇಕಡವಾರು ಎಷ್ಟು ಮೊಕದ್ದಮೆಗಳಲ್ಲಿ ಶಿಕ್ಷೆಯಾಗಿವೆ ?

(ಇ) ಕೊಲೆ ಮೊಕದ್ದಮೆಗಳು, ದರೋಡೆಗಳು ಹಾಗೂ ದಾರಿ ದರೋಡೆಗಳ ಸಂಖ್ಯೆ ಎಷ್ಟು ?

(ಈ) ಕೊಲೆ ದಾರಿ ದರೋಡೆಗಳು ಎಷ್ಟು ಮೊಕದ್ದಮೆಗಳಲ್ಲಿ ಅಪರಾಧಿಗಳು ಸಿಕ್ಕಿದ್ದಾರೆ ? ಎಷ್ಟು ಮೊಕದ್ದಮೆಗಳಲ್ಲಿ ಪತ್ತೆ ಹಚ್ಚಲಾಗಿದೆ ?

(ಉ) ಆರಕ್ಷಕ ಇಲಾಖೆಯಲ್ಲಿ ಕೇಸ್ ಪತ್ತೆ ಹಚ್ಚಲು ದಕ್ಷತೆ ಕಡಿಮೆಯಾಗುತ್ತಿರುವ ಅಪಾದನೆಯನ್ನು ಸರಿಪಡಿಸಲು ಸರ್ಕಾರದವರು ಯಾವ ಕ್ರಮ ಕೈಗೊಳ್ಳಲಾಗಿದೆ ?

ಶ್ರೀ ಬಿ. ರಾಚಯ್ಯ (ಗೃಹ ಸಚಿವರು).—

(ಅ) ರಾಜ್ಯದಲ್ಲಿ ೧-೧-೧೯೮೬ ರಿಂದ ೩೦-೬-೮೬ರ ವರೆಗೆ ದಾಖಲಾದ ಕ್ರಿಮಿನಲ್ ಮೊಕದ್ದಮೆಗಳ ಸಂಖ್ಯೆ	ಪತ್ತೆ ಹಚ್ಚಿದ ಮೊಕದ್ದಮೆಗಳು	'ಬಿ' ರಿಪೋರ್ಟ್ ಕೊಟ್ಟಿದ್ದು	'ಸಿ' ರಿಪೋರ್ಟ್ ಕೊಟ್ಟಿದ್ದು
೩೫೫೬೮	೧೬೩೬೨	೧೪೨೪	೩೮೪೭

(ಆ) ನ್ಯಾಯಾಲಯದಲ್ಲಿ ದಾಖಲಾಗಿರುವ ಸಂಖ್ಯೆ	ಶಿಕ್ಷೆಯಾಗಿರುವುವು	ಮುಗಿದಿರುವ ಪ್ರಕರಣಗಳು	ಶಿಕ್ಷೆಯಾದ ಪ್ರಕರಣಗಳ ಶೇಕಡಾವಾರು
೧೬೮೧	೨೨೨೪	೩೭೮	ಶೇ ೧೩.೨೨

ಕೊಲೆ ಮೊಕದ್ದಮೆಗಳು—೪೯೮

ದರೋಡೆಗಳು—೧೦೬

ದಾರಿ ದರೋಡೆಗಳು—೩

೧) ಒಟ್ಟು ಕೊಲೆ ಮೊಕದ್ದಮೆಗಳಲ್ಲಿ ಸಿಕ್ಕ ಅಪರಾಧಿಗಳ ಸಂಖ್ಯೆ	ಪತ್ತೆ ಹಚ್ಚಲಾದ ಮೊಕದ್ದಮೆಗಳು
೪೦೩	೩೬೪

೨) ದಾರಿ ದರೋಡೆ ಮೊಕದ್ದಮೆಗಳಲ್ಲಿ ಸಿಕ್ಕಿರುವ ಅಪರಾಧಿಗಳ ಸಂಖ್ಯೆ	ಪತ್ತೆ ಹಚ್ಚಲಾದ ಮೊಕದ್ದಮೆಗಳು
೨	೧

೧) ರಾಜ್ಯದ ಎಲ್ಲಾ ಪೋಲೀಸ್ ಠಾಣೆಗಳಲ್ಲಿ ರಾತ್ರಿ ಗಸ್ತನ್ನು ಬಿಗಿಗೊಳಿಸಲಾಗಿದೆ.

೨) ನಾಕ ಬಂಧಿಯನ್ನು ಎಲ್ಲಾ ಜಿಲ್ಲೆಗಳಲ್ಲಿ ಮಾಡಲಾಗಿದೆ.

೩) ಪಸ್ತು ಕಳವುಗಳ ಬಗ್ಗೆ ಮತ್ತು ಎಮ್.ಓ.ಬಿ. ಕ್ರಿಮಿನಲ್‌ಗಳನ್ನು ವೈಜ್ಞಾನಿಕ ರೀತಿಯಲ್ಲಿ ಪತ್ತೆ ಹಚ್ಚುವ ಯಂತ್ರಗಳ ಮೂಲಕ ಬೆಂಗಳೂರು ನಗರ ಮತ್ತು ಇತರೆ ಕೇಂದ್ರಗಳಲ್ಲಿ ಅಳವಡಿಸಲಾಗಿದೆ.

ಮೈಸೂರಿನಲ್ಲಿ 'ನೆಹರು ಲೋಕ' ನಿರ್ಮಾಣದ ಬಗ್ಗೆ

೨೪ (೧೮೯) ಶ್ರೀ ವೇದಾಂತ ಹೆಮ್ಮಿಗೆ (ಕೃಷ್ಣರಾಜ).—ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೆ :—

(ಅ) ಸರಕಾರದವರು ಮೈಸೂರಿನಲ್ಲಿ ನೆಹರುಲೋಕ ನಿರ್ಮಾಣ ಮಾಡಲು ರಚಿಸಿದ್ದ ಸಮಿತಿಯು ವರದಿ ಸಲ್ಲಿಸಿ ಎಷ್ಟು ವರ್ಷಗಳಾಯಿತು?

(ಆ) ಇದುವರೆವಿಗೆ ಸಮಿತಿಯ ವರದಿ ಬಗ್ಗೆ ಸರಕಾರದವರು ಕೈಗೊಂಡಿರುವ ಕ್ರಮಗಳೇನು ?

(ಇ) ಇದಕ್ಕಾಗಿ ಮಾಡಲಾಗಿರುವ ಅಂದಾಜು ವೆಚ್ಚವೆಷ್ಟು ?

ಶ್ರೀ ರಾಮಕೃಷ್ಣ ಹೆಗಡೆ (ಮುಖ್ಯ ಮಂತ್ರಿಗಳು).—

(ಆ) ೨೦ ವರ್ಷಗಳು.